ESTD : 1994

# ರಾಮಕೃಷ್ಣ ಸುದ್ದಿ ಸಂಚಯ

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com    Email : ho@ramakrishnacredit.com

TREASURY OF TRUST & SERVICE 25 1994-2019

**ಸಂಪುಟ : V**    **ಸಂಚಿಕೆ : 1**    **ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ**    **ಏಪ್ರಿಲ್-ಜೂನ್ 2019**


## ಅಧ್ಯಕ್ಷರ ಮಾತು



**ಶ್ರೀ ಕೆ. ಜೈರಾಜ್ ಬಿ. ರೈ**
**ಅಧ್ಯಕ್ಷರು**

ಸಂಘವು ಮೇ 7, 2019ರಂದು 25ನೇ ವರ್ಷಕ್ಕೆ ಕಾಲಿಟ್ಟಿದೆ. 2019-20ನೇ ಸಾಲು ಸಂಘದ ಬೆಳ್ಳಿ ಹಬ್ಬದ ಸಂಭ್ರಮಾಚರಣೆ ವರ್ಷ. ತಮಗೆಲ್ಲರಿಗೂ ಸಂಘದ 25ನೇ ವರ್ಷದ ಸಂಸ್ಥಾಪನೆಯ ದಿನದ ಶುಭಾಶಯವನ್ನು ಸಲ್ಲಿಸುತ್ತಾ, 2019-20ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿಯ ಪ್ರಗತಿ ವಿವರವನ್ನು ಹಂಚಿಕೊಳ್ಳಲು ಹರ್ಷಿಸುತ್ತೇನೆ.

### ಠೇವಣಿಯು ಈ ತ್ರೈಮಾಸಿಕ ಅವಧಿಯಲ್ಲಿ ರೂ.200 ಕೋಟಿ ಮೀರಿ ಹೊಸ ಮೈಲಿಗಲ್ಲನ್ನು ದಾಟಿದೆ

2019-20ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿ 30.06.2019ಕ್ಕೆ ಇದ್ದಂತೆ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ಸಂಘವು ಈ ಸಾಲಿನಲ್ಲಿ ಉತ್ತಮ ಆರಂಭವನ್ನು ಮಾಡಿದೆ. 31.03.2019ಕ್ಕೆ ರೂ.194 ಕೋಟಿಯಿದ್ದ ಠೇವಣಾತಿಯು 30.06.2019ಕ್ಕೆ ರೂ.201 ಕೋಟಿಯನ್ನು ತಲುಪಿ ರೂ.7 ಕೋಟಿ ವೃದ್ಧಿಯಾಗಿದೆ. ಸಾಲ ಮತ್ತು ಮುಂಗಡವು 31.03.2019ಕ್ಕೆ ರೂ.159 ಕೋಟಿ ಇದ್ದು, 30.06.2019ಕ್ಕೆ ರೂ.170 ಕೋಟಿಯಾಗಿದ್ದು ರೂ.11 ಕೋಟಿ ಹೆಚ್ಚಳವಾಗಿರುವುದು. ಮೊದಲ ತ್ರೈಮಾಸಿಕ (30.06.2019)ಕ್ಕೆ ಸಂಘವು ರೂ. 1.02 ಕೋಟಿ ನಿವ್ವಳ ಲಾಭ ಗಳಿಸಿರುತ್ತದೆ. ಒಟ್ಟು ವ್ಯವಹಾರ 31.03.2019ಕ್ಕೆ ರೂ.352 ಕೋಟಿಯಿದ್ದು, 30.06.2019ಕ್ಕೆ ರೂ.371 ಕೋಟಿ ಆಗಿ ರೂ.19 ಕೋಟಿ ಹೆಚ್ಚಳವಾಗಿದೆ. ಈ ಅವಧಿಯಲ್ಲಿ ಸಂಘದ ಠೇವಣಾತಿ ರೂ.200 ಕೋಟಿಯನ್ನು ಮೀರಿ ಹೊಸ ಮೈಲಿಗಲ್ಲನ್ನು ದಾಟಿದೆ. Net NPA 0%.

30.06.2018ಕ್ಕೆ ಹೋಲಿಸುವಾಗ, ಠೇವಣಾತಿಯಲ್ಲಿ ರೂ.34 ಕೋಟಿ ಹೆಚ್ಚಳದಿಂದ ಶೇ.21 ವೃದ್ಧಿ. ಸಾಲ ಮತ್ತು ಮುಂಗಡವು ರೂ.38 ಕೋಟಿ ಹೆಚ್ಚಳದೊಂದಿಗೆ, ಶೇ.29 ವೃದ್ಧಿ. ಒಟ್ಟು ವ್ಯವಹಾರವು ರೂ.72 ಕೋಟಿ ವೃದ್ಧಿ ಹೊಂದಿ ಶೇ.24 ಹೆಚ್ಚಳವಾಗಿ, ಸಂಘವು ದಿನದಿಂದ ದಿನಕ್ಕೆ ಸುದೃಢವಾಗಿ ವೃದ್ಧಿಯಾಗಿರುವುದು, ಸಂಘದಲ್ಲಿ ತೊಡಗಿಸಿ ಕೊಂಡವರೆಲ್ಲರಿಗೂ ಬಹಳ ಹೆಮ್ಮೆಯ ವಿಷಯ. ಈ ಸಾಧನೆಗೆ ಸಹಕರಿಸಿದ ಸರ್ವರಿಗೂ ಸಂಘದ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು.

**ಜೂನ್ 2018ಕ್ಕೆ ಹೋಲಿಸಿದಲ್ಲಿ ಜೂನ್ 2019ಕ್ಕೆ ಆಗಿರುವ ಪ್ರಗತಿಯ ಪಕ್ಷಿನೋಟ** (ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಕಾರ್ಯ ವಿಭಾಗ | ಜೂನ್ 2018ಕ್ಕೆ ಇದ್ದಂತೆ | ಜೂನ್ 2019ಕ್ಕೆ ಇದ್ದಂತೆ | ಹೆಚ್ಚಳ (ರೂ) | ಶೇಕಡಾವಾರು ವೃದ್ಧಿ |
|---|---|---|---|---|---|
| 1 | ಠೇವಣಾತಿಗಳು | ₹ 166.83 Cr. | ₹ 201.04 Cr. | 34.21 ಕೋಟಿ | 21% |
| 2 | ಸಾಲ ಮತ್ತು ಮುಂಗಡ | ₹ 131.59 Cr. | ₹ 169.64 Cr. | 38.05 ಕೋಟಿ | 29% |
| 3 | ನಿವ್ವಳ ಅನುತ್ಪಾದಕ ಆಸ್ತಿ | Nil | Nil | | |
| 4 | ನಿವ್ವಳ ಲಾಭ | ₹ 92.70 lakhs | ₹ 1.02 Cr. | 9.30 ಲಕ್ಷ | 10% |
| 5 | ಒಟ್ಟು ವ್ಯವಹಾರ | ₹ 298.41 Cr. | ₹ 370.68 Cr. | 72.27 ಕೋಟಿ | 24% |

**ಕೆ. ಜೈರಾಜ್ ಬಿ. ರೈ**
**ಅಧ್ಯಕ್ಷರು**

## ನಿರ್ದೇಶಕರಾದ ದಿ। ಎಂ. ಸೀತಾರಾಮ ಶೆಟ್ಟಿಯವರಿಗೆ ಶ್ರದ್ಧಾಂಜಲಿ



ದಿನಾಂಕ 13.06.2019ರಂದು ನಿಧನರಾದ ಸಂಘದ ನಿರ್ದೇಶಕರಾದ ಶ್ರೀ ಎಂ.ಸೀತಾರಾಮ ಶೆಟ್ಟಿಯವರ ನಿಧನಕ್ಕೆ ದಿನಾಂಕ 29.06.2019 ರಂದು ಜರಗಿದ ಆಡಳಿತ ಮಂಡಳಿ ಸಭೆಯಲ್ಲಿ ಅಧ್ಯಕ್ಷರು ಹಾಗೂ ನಿರ್ದೇಶಕರುಗಳು ತೀವ್ರ ಸಂತಾಪ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು, ಶ್ರೀ ಎಂ. ಸೀತಾರಾಮ ಶೆಟ್ಟಿಯವರು 2005ರಿಂದ ಈತನಕ ಸಂಘದ ಆಡಳಿತ ಮಂಡಳಿ ನಿರ್ದೇಶಕರಾಗಿದ್ದು, ಸಂಘದ ಆಗುಹೋಗುಗಳ ಬಗ್ಗೆ ಸಂದರ್ಭೋಚಿತ ಮಾರ್ಗದರ್ಶನ ನೀಡಿ, ಸಂಘದ ಏಳಿಗೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದವರು ಎಂದು ಹೇಳಿ, ಅವರು ಸಂಘಕ್ಕೆ ನೀಡಿರುವ ಸೇವೆ ಹಾಗೂ ವೃತ್ತಿಕ್ಷೇತ್ರದಲ್ಲಿ ಅವರು ಮಾಡಿರುವ ಸಾಧನೆಗಳನ್ನು ಸ್ಮರಿಸಿ ನುಡಿನಮನವನ್ನು ಸಲ್ಲಿಸಿದರು. ನಿರ್ದೇಶಕರಾದ ಶ್ರೀ ಪಿ.ಬಿ. ದಿವಾಕರ ರೈಯವರು ಶ್ರೀ ಸೀತಾರಾಮ ಶೆಟ್ಟಿಯವರ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ನೆನಪಿಸಿಕೊಂಡರು. ದಿ। ಎಂ. ಸೀತಾರಾಮ ಶೆಟ್ಟಿಯವರಿಗೆ ಸಂಘದ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿ ಅಗಲಿದ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರಲಾಯಿತು.

## ಶ್ರದ್ಧಾಂಜಲಿ




ಸಂಘದ ಕಾರ್ಕಳ ಶಾಖೆಯ ಸಲಹಾ ಸಮಿತಿ ಅಧ್ಯಕ್ಷರಾದ ಶ್ರೀ ಶಿವರಾಮ ಶೆಟ್ಟಿಯವರು ದಿನಾಂಕ 22.04.2019ರಂದು ದೈವಾಧೀನರಾದರು. ಇವರ ನಿಧನಾರ್ಥ ದಿನಾಂಕ 26.04.2019 ರಂದು ಕಾರ್ಕಳ ಶಾಖೆಯಲ್ಲಿ ಶ್ರದ್ಧಾಂಜಲಿ ಸಭೆಯನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಮಾತನಾಡಿ, ಶ್ರೀ ಶಿವರಾಮ ಶೆಟ್ಟಿಯವರು ಕಾರ್ಕಳ ಶಾಖೆಯ ಬೆಳವಣಿಗೆಗೆ ನೀಡಿದ ಸೇವೆಯನ್ನು ಹಾಗೂ ಅವರ ವೈಯಕ್ತಿಕ ಸಾಧನೆಗಳನ್ನು ಸ್ಮರಿಸಿ ನುಡಿನಮನ ಸಲ್ಲಿಸಿದರು. ದಿ। ಶಿವರಾಮ ಶೆಟ್ಟಿಯವರಿಗೆ ಸಂಘದ ವತಿಯಿಂದ ಶ್ರದ್ಧಾಂಜಲಿ ಅರ್ಪಿಸಿ, ಅಗಲಿದ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರಲಾಯಿತು.

## ಸನ್ಮಾನ



ಎಸ್‌ಸಿಡಿಸಿಸಿ ಬ್ಯಾಂಕಿನ ನಿರ್ದೇಶಕರಾಗಿ ಆಯ್ಕೆಯಾದ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರಿಗೆ ದಿನಾಂಕ 28.06.2019ರಂದು ರೋಜರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಕುಂದಾಪುರರವರಿಂದ ಸನ್ಮಾನ

## ಅಭಿನಂದನೆಗಳು



ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್‌ನ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಸಂಘದ ನಿರ್ದೇಶಕರಾದ ಶ್ರೀ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿಯವರನ್ನು ದಿನಾಂಕ 29.06.2019ರಂದು ಜರಗಿದ ಆಡಳಿತ ಮಂಡಳಿ ಸಭೆಯಲ್ಲಿ ಸಂಘದ ವತಿಯಿಂದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಹಾಗೂ ನಿರ್ದೇಶಕರುಗಳು ಸನ್ಮಾನಿಸಿ ಅಭಿನಂದಿಸಿದರು.

## ಸಹಕಾರ ಸಂಘಗಳ ಉಪನಿಬಂಧಕರು ಸಂಘದ ಕೇಂದ್ರ ಕಛೇರಿಗೆ ಭೇಟಿ



ಡಾ। ಸುರೇಶ್‌ಗೌಡ ಕೆಸಿಎಸ್, ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ಇವರು ಸಂಘಕ್ಕೆ ಭೇಟಿ ನೀಡಿದಾಗ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಯವರು ಹೂಗುಚ್ಛ ನೀಡಿ ಸ್ವಾಗತಿಸಿದರು.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ (ರಿ) ಮಂಗಳೂರು ಶಾಖೆ ಹಾಗೂ ಅಖಿಲ ಕರ್ನಾಟಕ ರಾಜ್ಯ ಜನಜಾಗೃತಿ ವೇದಿಕೆ ಮಂಗಳೂರು ತಾಲೂಕು ಇವರ ನೇತೃತ್ವದಲ್ಲಿ ದಿನಾಂಕ 25.05.2019ರಂದು ಮಂಗಳೂರಿನಲ್ಲಿ ಜರಗಿದ 1341ನೇ ಮದ್ಯವರ್ಜನ ಶಿಬಿರದಲ್ಲಿ ಸಂಘವು ಸಹಭಾಗಿತ್ವ ವಹಿಸಿತ್ತು. ಈ ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಉದ್ಘಾಟಿಸಿದರು.

## ಶ್ರೀ ಚಂದ್ರಮೌಳೀಶ್ವರ ಕೋ-ಓಪ್. ಸೊಸೈಟಿ ಲಿ., ಕ್ಯಾತ್‌ಸಾಂದ್ರ ತುಮಕೂರು ಇದರ ಆಡಳಿತ ಮಂಡಳಿ ಪ್ರತಿನಿಧಿಗಳು ಸಂಘಕ್ಕೆ ಅಧ್ಯಯನ ಭೇಟಿ



ಶ್ರೀ ಚಂದ್ರಮೌಳೀಶ್ವರ ಕೋ-ಓಪರೇಟಿವ್ ಸೊಸೈಟಿ ಲಿ., ಕ್ಯಾತ್‌ಸಾಂದ್ರ ತುಮಕೂರು ಜಿಲ್ಲೆ ಇದರ ಆಡಳಿತ ಮಂಡಳಿ ಪ್ರತಿನಿಧಿಗಳು ದಿನಾಂಕ 22.02.2019 ರಂದು ನಮ್ಮ ಸಂಘಕ್ಕೆ ಅಧ್ಯಯನ ಭೇಟಿ ನೀಡಿದರು.

## ಕಳೆದ ಸಾಲಿನಂತೆ ಈ ಸಾಲಿನಲ್ಲೂ ಕೂಡ ಆಯಾಯ ಶಾಖೆಗಳ ಪ್ರಾರಂಭದ ದಿನದಂದು ಗ್ರಾಹಕರ ಸಂಪರ್ಕ ಸಭೆಯನ್ನು ಈ ತ್ರೈಮಾಸಿಕ ಅವಧಿಯಲ್ಲಿ ಆಯೋಜಿಸಲಾಗಿದೆ

**17.06.2019ರಂದು ವೆಲೆನ್ಸೀಯಾ ಶಾಖೆಯ ಗ್ರಾಹಕ ಸಂಪರ್ಕ ಸಭೆ :**



## 2019ನೇ ಸಾಲಿನಲ್ಲಿ ಉತ್ತಮ ಶೈಕ್ಷಣಿಕ ಸಾಧನೆ ತೋರಿದ ಸಂಘದ ಸಿಬ್ಬಂದಿಗಳ ಮಕ್ಕಳಿಗೆ ಅಭಿನಂದನೆಗಳು



ಸಂಘದ ಬ್ರಹ್ಮಾವರ ಶಾಖೆಯ ಶಾಖಾ ವ್ಯವಸ್ಥಾಪಕರಾದ ಶ್ರೀ ಅಮರನಾಥ ಎಸ್. ಹೆಗ್ಡೆರವರ ಮಗಳಾದ ಕು. ಲಿಪಿ ಹೆಗ್ಡೆ ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.95.6 ಪಡೆದಿರುತ್ತಾರೆ. ಇವರು ಶ್ರೀ ಸಿದ್ಧಿವಿನಾಯಕ ರೆಸಿಡೆನ್ಸಿಯಲ್ ಸ್ಕೂಲ್, ಹಟ್ಟಿಯಂಗಡಿ ಶಾಲೆಯ ವಿದ್ಯಾರ್ಥಿನಿ.

2019ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿರುವ ಕು. ಲಿಪಿ ಹೆಗ್ಡೆ ರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಉಜ್ವಲ ಭವಿಷ್ಯವನ್ನು ಹಾರೈಸುತ್ತೇವೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಸಾಧನೆಯನ್ನು ಮಾಡಿದ ಸಿಬ್ಬಂದಿಗಳ ಮಕ್ಕಳನ್ನು ಸಂಘದ ಮಹಾಸಭೆಯಲ್ಲಿ ಅಭಿನಂದಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

### ಅಭಿನಂದನೆಗಳು

ಸಂಘದ ಉಡುಪಿ ಶಾಖಾ ಸಿಬ್ಬಂದಿ ಶ್ರೀಮತಿ ತುಳಸಿ, ಇವರು ಗಂಡು ಮಗುವಿನ ತಾಯಿಯಾಗಿದ್ದಾರೆ. ಇವರಿಗೆ ಹಾರ್ದಿಕ ಅಭಿನಂದನೆಗಳು.

## ಹುಟ್ಟು ಹಬ್ಬದ ಶುಭಾಶಯಗಳು

ಶ್ರೀಮತಿ ಲಕ್ಷ್ಮೀ ಜೆ. ಶೆಟ್ಟಿ – ಉಪಾಧ್ಯಕ್ಷರು
ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ – ನಿರ್ದೇಶಕರು
ಸವಣೂರು ಶ್ರೀ ಕೆ. ಸೀತಾರಾಮ ರೈ – ನಿರ್ದೇಶಕರು

### ಸಿಬ್ಬಂದಿಗಳ ಹೆಸರು ಮತ್ತು ಶಾಖೆ

| | |
|---|---|
| ಶ್ರೀ ತಿಮ್ಮಯ್ಯ ಶೆಟ್ಟಿ, ಹಂಪನಕಟ್ಟೆ | ಶ್ರೀ ಸುರೇಶ್ ನ್ಯಾಕ್, ಮೂಡಬಿದ್ರಿ |
| ಶ್ರೀ ಚಂದ್ರಹಾಸ್ ಶೆಟ್ಟಿ, ವೆಲೆನ್ಸೀಯಾ | ಶ್ರೀಮತಿ ರೇಖಾ ಎನ್. ಶೆಟ್ಟಿ, ಸುರತ್ಕಲ್ |
| ಶ್ರೀ ದಿನೇಶ್ ಶೆಟ್ಟಿ, ಕಡಬ | ಶ್ರೀಮತಿ ಮಮತಾ ಎಂ., ಮಂಗಳೂರು |
| ಶ್ರೀಮತಿ ವೈಶಾಲಿ, ಬಿ.ಸಿ.ರೋಡ್ | ಶ್ರೀಮತಿ ಶ್ವೇತಾ, ಕೇಂದ್ರ ಕಛೇರಿ |
| ಶ್ರೀ ದಿನೇಶ್ ರೈ, ಸುಳ್ಯ | ಶ್ರೀ ಮೋಹನ್ ಶೆಟ್ಟಿ, ಉಡುಪಿ |
| ಶ್ರೀ ಸುಧೀರ್ ಕುಮಾರ್ ಡಿ., ಚಿಲಿಂಬಿ | ಶ್ರೀ ನವೀನ್ ಶೆಟ್ಟಿ, ಕೇಂದ್ರ ಕಛೇರಿ |
| ಶ್ರೀ ದಿತೇಶ್, ಮುಲ್ಕಿ | ಶ್ರೀ ಅಮಿತ್‌ಕುಮಾರ್, ವೆಲೆನ್ಸೀಯಾ |
| ಶ್ರೀ ಸುಭ್ರತ್, ಹೆಬ್ರಿ | ಶ್ರೀಮತಿ ಅರುಣಾ ರೈ, ಚಿಲಿಂಬಿ |
| ಶ್ರೀ ಜಯರಾಮ್, ಬೈಂದೂರು | ಶ್ರೀ ಸುಜಿತ್, ಚಿಲಿಂಬಿ |
| ಶ್ರೀ ಪ್ರವೀಣ್ ರೈ, ಕಡಬ | ಶ್ರೀಮತಿ ಶ್ರೀಲಕ್ಷ್ಮಿ, ಸುರತ್ಕಲ್ |
| ಶ್ರೀ ವಿರಾಜ್ ಜೆ. ಶೆಟ್ಟಿ ಕಾರ್ಕಳ | ಶ್ರೀಮತಿ ಫ್ಲಾವಿಯಾ ಜೇನ್ ಪಿಂಟೋ, ವಿಟ್ಲ |
| ಶ್ರೀಮತಿ ಮಮತಾ ಎಚ್., ಪುತ್ತೂರು | ಕು. ಸುಶ್ಮಿತಾ, ಉಡುಪಿ |
| ಶ್ರೀ ಅಶೋಕ್ ಎಂ., ಮೂಡಬಿದ್ರಿ | ಕು. ಸುಮತಿ, ಬ್ರಹ್ಮಾವರ |

ಈ ತ್ರೈಮಾಸಿಕ ಅವಧಿಯಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ತಮಗೆಲ್ಲರಿಗೂ ಹುಟ್ಟುಹಬ್ಬದ ಹಾರ್ದಿಕ ಶುಭವನ್ನು ಕೋರುತ್ತೇವೆ.

## ಸಂಘದ ವಾರ್ಷಿಕ ಮಹಾಸಭೆಯ ದಿನಾಂಕ ನಿಗದಿ

ನಮ್ಮ ಸಂಘದ 2018–19ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು 01.09.2019ನೇ ಆದಿತ್ಯವಾರ "ಮಂಗಳೂರಿನ ಲೇಡಿಹಿಲ್‌ನಲ್ಲಿರುವ ಉರ್ವಚರ್ಚ್ ಸೆಂಟನರಿ ಹಾಲ್"ನಲ್ಲಿ ಜರಗಿಸಲು ತೀರ್ಮಾನಿಸಲಾಗಿದೆ. ಸಭೆಯ ನೋಟೀಸನ್ನು ಅರ್ಹ ಸದಸ್ಯರಿಗೆ ಕಳುಹಿಸಲಾಗುವುದು.

Private Circulation only

**BOOK-POST**

**To,**

If not delivered please return to :
**SRI RAMAKRISHNA CREDIT CO-OP. SOCIETY LTD.**
2nd Floor, Amruthotsava Building, Bunts Hostel Circle, Mangalore - 575 003.